# <u>ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ.</u>

## ಸಿ. ಸಿ. ನಂಃ 144/2020

ಪಿ.ಡಬ್ಲೂ- 6
ಸಿ.ಡಬ್ಲೂ- 9

| | | |
|---|---|---|
| ಹೆಸರು | ಃ- | ಶರಣಪ್ಪ ಅಕ್ಕಿ |
| ತಂದೆ / ಗಂಡನ ಹೆಸರು | ಃ- | ಸುಜ್ಞಾನಪ್ಪ |
| ವಯಾ | ಃ- | 65 ವರ್ಷ |
| ಉದ್ಯೋಗ | ಃ- | ನಿವೃತ್ತ ಆರ ಟಿ ಓ |
| ವಾಸಸ್ಥಳ | ಃ- | ಧಾರವಾಡ |

ಸತ್ಯ ಪ್ರತಿಜ್ಞೆ ಮೇರೆಗೆ - ದಿನಾಂಕಃ 28-10-2025

<u>*ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ*</u>

1) ನಾನು 2012 ರಿಂದ 2020 ರವರಿಗೆ ಧಾರವಾಡದ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಮೋಟಾರ ವಾಹನ ತನಿಖಾಧಿಕಾರಿ ಎಂದು ಕಾರ್ಯ ನಿರ್ವಹಿಸುತ್ತಿರುತ್ತೇನೆ.

2) ದಿನಾಂಕ 18-09-2019 ರಂದು ನವಲಗುಂದು ವೃತ್ತ ನಿರೀಕ್ಷಕರು ವಾಹನ ಪರಿಶೀಲನೆಗೆ ಕೋರಿಕೆಯನ್ನು ನೀಡಿದ್ದು, ಸದರಿ ಕೋರಿಕೆ ಮೇರೆಗೆ ಅದೇ ದಿನ ಸಂಜೆ 05-00 ಗಂಟೆ ಸಮಯದಲ್ಲಿ ನವಲಗುಂದ ಪೊಲೀಸ ಠಾಣಾ ಆವಾರಣದಲ್ಲಿ ಅಪಘಾತಕ್ಕೆ ಒಳಗಾದ ವಾಹನ ಸಂಖ್ಯೆ ಕೆಎ 25 ಟಿಬಿ 4696 ಟ್ರ್ಯಾಕ್ಟರ ಹಾಗೂ ವಾಹನ ಸಂಖ್ಯೆ ಕೆಎ 26 ವಿ 1427 ಮೋಟಾರ ಸೈಕಲ್ ನ್ನು ಪರಿಶೀಲನೆ ಮಾಡಿ ಟ್ರ್ಯಾಕ್ಟರ ವಾಹನಕ್ಕೆ ಈ ಕೆಳಗಿನಂತೆ ಅಬಿಪ್ರಾಯ ಪಟ್ಟಿರುತ್ತೇನೆ.

1) Rear right wheel rim slightly bend and damaged.

2) Rear right wheel mudguard & right side engine cover slightly bend and damaged.

3) Right side of the battery box cover broken and damaged.

ಹಾಗೂ ಮೋಟಾರ ಸೈಕಲ್ ಪರಿಶೀಲನೆ ಮಾಡಿ ಈ ಕೆಳಗಿನಂತೆ ಅಭಿಪ್ರಾಯ ಪಟ್ಟಿರುತ್ತೇನೆ.

1) Front wheel mudguard broken & damaged.

2) Front both side forks bent in & damaged.

3) Steering handle twisted & damaged.

4) Head light & its doom broken & damaged.

5) Both sides frontal indicators broken and damaged.

6) Rear right side indicator broken and damaged.

ಈ ರೀತಿ ಕಂಡು ಬಂದಿದ್ದು ಅದಕ್ಕೆ ಗಮನಿಸಿದ್ದೇನೆ. ಸದರಿ ವಾಹನಗಳಲ್ಲಿ ಟ್ರ್ಯಾಕ್ಟರನ್ನು ರಸ್ತೆಯ ಮೇಲೆ ಚಲಾಯಿಸಿ ನೋಡಿದಾಗ ಅದರ ಅಡತಡೆ ವ್ಯವಸ್ಥೆ ಸುಸ್ಥಿತಿಯಲ್ಲಿ ಇದ್ದಿದ್ದು ಕಂಡು ಬಂದಿರುತ್ತದೆ. ಅದೇ ರೀತಿ ದ್ವಿಚಕ್ರ ವಾಹನವು ನಿಂತ ಸ್ಥಳದಲ್ಲಿ ಪರಿಶೀಲಿಸಿ ನೋಡಲಾಗಿ ಅದರ ಅಡತಡೆ ವ್ಯವಸ್ಥೆ ಹಾಗೂ ಭಾಗಗಳು ಸುಸ್ಥಿತಿಯಲ್ಲಿ ಇದ್ದಿದ್ದು ಕಂಡು ಬಂದಿರುತ್ತದೆ.

3) ಆದಕಾರಣ ಈ ಪ್ರಕರಣದ ಅಪಘಾತ ಯಾವುದೇ ಯಾಂತ್ರಿಕ ದೋಷದಿಂದ ಆಗಿಲ್ಲವೆಂದು ಅಭಿಪ್ರಾಯ ಪಟ್ಟು ನಾನು ವರದಿಯನ್ನು ಸಲ್ಲಿಸಿದ್ದೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.**14** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.14(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲು ಃ ಶ್ರೀ ಎಸ್ ವಿ ಎಂ ವಕೀಲರಿಂದ ಃ -

1) ನಾನು ನವಲಗುಂದ ಠಾಣೆಯಲ್ಲಿ ಎಂದಿಗೂ ಸಹ ಪ್ರಕರಣದ ವಾಹನಗಳನ್ನು ಪರಿಶೀಲನೆ ಮಾಡಿಲ್ಲ ಅಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯ ಕೋರಿಕೆಯ ಮೇರೆಗೆ

ದೂರುದಾರರಿಗೆ ವಿಮೆಯ ಸೌಲಭ್ಯ ಒದಗಿಸಿ ಕೊಡಲು ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ವರದಿಯನ್ನು ನೀಡಿರುತ್ತೇನೆ ಅಂದರೆ ಸರಿಯಲ್ಲ. ತನಿಖಾಧಿಕಾರಿಯ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲಾ</u>**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ. ಇದೆ.

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**